# UNNAT BHARAT ABHIYAN CELL

(REGIONAL COORDINATING INSTITUTE)
KARNATAK UNIVERSITY DHARWAD

RCI
MONTHLY
PROGRESS
REPORT
OF
THE
YEAR
2020-21

## (JULY MONTH)

EVENTS & ACTIVITIES CARRIED OUT

VISITED & SPREADING AWARENESS PROGRAMME ABOUT COVID-19, IN UBA ADOPTED VILLAGES namely DUMMAWADA & SHIRAGUPPI ON 02 JULY 2020

# CONDUCTED AWARENESS PROGRAMME ABOUT COVID-19

## DISTRIBUTING MASKS TO
## VILLAGERS OF DUMMAWAD












*Dr. Sangeetha Mane,*
*Professor (MSW), KUD,*
*addressing to villagers*
*about*
*COVID-19 precautions.*



*Dr. N. Ramanjaneyalu,*
*Coordinator (UBA), KUD,*
*distributing masks*
*to villagers.*






## CONDUCTED AWARENESS PROGRAMME ABOUT COVID-19

DISTRIBUTING MASKS TO
VILLAGERS OF SHIRAGUPPI












*Dr.N.Ramanjaneyalu, Coordinator (UBA),KUD, along with Dr. Sangeetha Mane, Professor (MSW), KUD, distributing masks and addressing to the villagers about COVID-19 precautions.*

LINKS FOR NEWSPAPER Regional Popular Dailies **UDAYAVANI** (top) & **SAMYUKTA KARNATAKA** (bottom)



ಉದಯವಾಣಿ

# ಕೊರೊನಾ ತಡೆಗೆ ಮುಂಜಾಗ್ರತಾ ಕ್ರಮ ಅನುಸರಿಸಿ

ಕಲಘಟಗಿ: ದುಮ್ಮವಾಡದಲ್ಲಿ ಕೋವಿಡ್-19 ಜಾಗೃತಿ ಕಾರ್ಯಕ್ರಮದಲ್ಲಿ ಪ್ರೊ| ಜೆ.ಎಂ. ಚಂದುನವರ ಮಾತನಾಡಿದರು.

**ಕಲಘಟಗಿ:** ಮಳೆಗಾಲದ ಸಂದರ್ಭದಲ್ಲಿ ಕೊರೊನಾ ಅತಿ ತ್ವರಿತಗತಿಯಲ್ಲಿ ಮಕ್ಕಳು ಹಾಗೂ ವೃದ್ಧರಿಗೆ ಅಂಟಿಕೊಳ್ಳುವ ಸಾಧ್ಯತೆ ಹೆಚ್ಚಿರುವುದರಿಂದ ಮನೆಯಿಂದಲೇ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಪೋಷಕ ವರ್ಗ ಮುಂದಾಗಬೇಕು ಎಂದು ಭಾರತೀಯ ಕುಟುಂಬ ಯೋಜನೆಯ ಜಿಲ್ಲಾ ವ್ಯವಸ್ಥಾಪಕಿ ಸುಜಾತಾ ಆನಿಶೆಟ್ಟರ್ ಹೇಳಿದರು.

ದುಮ್ಮವಾಡ ಗ್ರಾಪಂ ಆವರಣದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಉನ್ನತ ಭಾರತ ಅಭಿಯಾನ ಕೋಶ ಮತ್ತು ದತ್ತು ಗ್ರಾಮ ದುಮ್ಮವಾಡ, ಸಮಾಜ ಕಾರ್ಯ ವಿಭಾಗ ಹಾಗೂ ಭಾರತೀಯ ಕುಟುಂಬ ಕಲ್ಯಾಣ ಯೋಜನೆ ಸಂಘದ ಜಿಲ್ಲಾ ಘಟಕದ ಆಶ್ರಯದಲ್ಲಿ ಆಯೋಜಿಸಿದ್ದ ಕೋವಿಡ್-19 ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪ್ರತಿಯೊಬ್ಬರು ಮುಖಗವಸು ಧರಿಸುವುದರಿಂದ ಸುಮಾರು ಶೇ. 70 ಕೊರೊನಾ ಸೋಂಕು ತಡೆಗಟ್ಟಲು ಸಹಕಾರಿಯಾಗುತ್ತದೆ. ಮನೆಯಲ್ಲಿಯೇ ತಯಾರಿಸಿದ ಬಿಸಿ ಪದಾರ್ಥಗಳನ್ನು ಸೇವಿಸುವುದರ ಜೊತೆಗೆ ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯವಾಗಿ ಪರಸ್ಪರ ಅಂತರವನ್ನು ಕಾಯ್ದುಕೊಳ್ಳಬೇಕು ಎಂದರು.

ಕವಿವಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಡಾ| ಜೆ.ಎಂ. ಚಂದುನವರ ಮಾತನಾಡಿ, ಗ್ರಾಮೀಣ ಭಾಗಗಳಲ್ಲಿ ಕೊರೊನಾ ಸೋಂಕು ದಿನದಿಂದ ದಿನಕ್ಕೆ ಹಬ್ಬುತ್ತಿದ್ದು, ಕೋವಿಡ್-19 ನಿಯಂತ್ರಣಕ್ಕಾಗಿ ಗ್ರಾಪಂ ಮಟ್ಟದ ಟಾಸ್ಕ್‌ಫೋರ್ಸ್ ಜೊತೆಗೆ ಎಲ್ಲರೂ ಕೈ ಜೋಡಿಸಬೇಕು ಎಂದು ಹೇಳಿದರು.

ಕವಿವಿ ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥೆ ಪ್ರೊ| ಸಂಗೀತಾ ಮಾನೆ, ಕವಿವಿ ಉನ್ನತ ಭಾರತ ಅಭಿಯಾನ ಕೋಶದ ಸಂಯೋಜಕ ಡಾ| ಎನ್. ರಾಮಾಂಜನೇಯಲು ಮಾತನಾಡಿದರು. ಗ್ರಾಮಸ್ಥರಿಗೆ ಉಚಿತವಾಗಿ ಮಾಸ್ಕ್ ವಿತರಿಸಲಾಯಿತು.

ಗ್ರಾಪಂ ಅಧ್ಯಕ್ಷೆ ಸಂಕವ್ವ ಬೆಟದೂರ, ಸದಸ್ಯರಾದ ಮೈಲಾರಿ ಕಡ್ಡಿಪಿಡಿ, ರಾಜು ಕಾಮಜಿ, ರಮೇಶ ಹೊಸಮನಿ, ಉಮೇಶ ಬಸರಿಕೊಪ್ಪ, ತಾಪಂ ಸದಸ್ಯ ಸಿದ್ದಪ್ಪ ಕುಂಬಾರ, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯೆ ಡಾ| ಸುಧಾ ಕೋಟೆಗೌಡರ, ಜಯಪಾಲ ಬೆಟದೂರ, ಯಲ್ಲಪ್ಪ ದೊಡ್ಡಮನಿ, ಈಶ್ವರ ಚಂಡುನವರ, ಪ್ರಕಾಶ ಜೋಡಳ್ಳಿ, ನವೀನಕುಮಾರ ತಿಪ್ಪಾ ಇದ್ದರು. ಪಿಡಿಒ ನಾಗರಾಜ ಗಿರಿಯಪ್ಪನವರ ಸ್ವಾಗತಿಸಿದರು. ಬಸಮ್ಮ ನಿರೂಪಿಸಿದರು.

Regional Popular Dailies

UDAYAVANI



ರೋಗ ನಿಯಂತ್ರಣಕ್ಕೆ ಸಾಮಾಜಿಕ ಅಂತರ ಅವಶ್ಯ

# ಮಹಾಮಾರಿಗೆ ಮುಂಜಾಗ್ರತೆ ಕ್ರಮ ಅವಶ್ಯ

ಕಲಘಟಗಿ ತಾಲೂಕಿನ ಧುಮ್ಮವಾಡ ಗ್ರಾಮದಲ್ಲಿ ಕೋವಿಡ್ - 19 ವೈರಸ್ ತಡೆಗಟ್ಟುವಿಕೆಗಾಗಿ ಗ್ರಾಮಸ್ಥರಿಗೆ ಮಾಸ್ಕ ವಿತರಿಸುತ್ತಿರುವುದು.

**ಸಂ.ಕ. ಸಮಾಚಾರ ಕಲಘಟಗಿ**

ಮಳೆಗಾಲದ ಸಂದರ್ಭದಲ್ಲಿ ಕೊರೊನಾ ರೋಗವು ಅತಿ ತ್ವರಿತಗತಿಯಲ್ಲಿ ಮಕ್ಕಳ ಹಾಗೂ ವೃದ್ಧರಿಗೆ ಅಂಟಿಕೊಳ್ಳುವ ಸಾಧ್ಯತೆ ಹೆಚ್ಚಿರುವುದರಿಂದ ಮನೆಯಿಂದಲೇ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಪೋಷಕ ವರ್ಗ ಮುಂದಾಗಬೇಕಿದೆ ಎಂದು ಭಾರತೀಯ ಕುಟುಂಬ ಯೋಜನೆಯ ಜಿಲ್ಲಾ ವ್ಯವಸ್ಥಾಪಕಿ ಸುಜಾತಾ ಆನಿಶೆಟ್ಟರ್ ತಿಳಿ ಹೇಳಿದರು.

ತಾಲೂಕಿನ ದುಮ್ಮವಾಡ ಗ್ರಾಪಂ ಆವರಣದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಉನ್ನತ ಭಾರತ ಅಭಿಯಾನ ಕೋಶ ಮತ್ತು ದತ್ತು ಗ್ರಾಮ ಧುಮ್ಮವಾಡ, ಸಮಾಜ ಕಾರ್ಯ ವಿಭಾಗ ಹಾಗೂ ಭಾರತೀಯ ಕುಟುಂಬ ಕಲ್ಯಾಣ ಯೋಜನೆ ಸಂಘದ ಜಿಲ್ಲಾ ಘಟಕ ಇವುಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಕೋವಿಡ್-19 ಸೋಂಕು ರೋಗದ ನಿಯಂತ್ರಣದ ಮುಂಜಾಗ್ರತಾ ಕ್ರಮಗಳ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರು ಮುಖಗವಚವನ್ನು ಧರಿಸುವುದರಿಂದಲೇ ಶೇ. 70 ರಷ್ಟು ಕೊರೊನಾ ಸೋಂಕು ತಡೆಗಟ್ಟಲು ಸಹಕಾರಿಯಾಗುತ್ತದೆ. ಮನೆಯಲ್ಲಿಯೇ ತಯಾರಿಸಿದ ಬಿಸಿ ಪದಾರ್ಥಗಳನ್ನು ಸೇವಿಸುವುದರ ಜೊತೆಗೆ ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯವಾಗಿ ಪರಸ್ಪರ ಅಂತರವನ್ನು ಕಾಯ್ದುಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ಕಡಿಮೆ ವೆಚ್ಚದಲ್ಲಿ ಮನೆಯಲ್ಲಿಯೇ ಮಾಸ್ಕ್ ತಯಾರಿಸುವುದನ್ನು ಪ್ರಾತ್ಯಕ್ಷಿಕವಾಗಿ ತರಬೇತಿ ನೀಡಿದರು.

ಕವಿವಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಡಾ. ಜೆ.ಎಂ. ಚಂದುನವರ ಮಾತನಾಡಿ, ಗ್ರಾಮೀಣ ಭಾಗಗಳಲ್ಲಿ ಕೊರೊನಾ ಸೋಂಕು ದಿನದಿಂದ ದಿನಕ್ಕೆ ಹಬ್ಬುತ್ತಿದ್ದು, ಕೋವಿಡ್-19 ನಿಯಂತ್ರಣಕ್ಕಾಗಿ ಗ್ರಾಪಂ ಮಟ್ಟದ ಟಾಸ್ಕ್ ಫೋರ್ಸ್ ಸಂಸ್ಥೆಯ ಜೊತೆಗೆ ಎಲ್ಲರೂ ಕೈ ಜೋಡಿಸುವುದರೊಂದಿಗೆ ಪ್ರತಿ ಓಣಿಗಳಲ್ಲಿ ಗ್ರಾಮಸ್ಥರು ಸಮಿತಿ ರಚಿಸಿಕೊಂಡು ಕಡ್ಡಾಯವಾಗಿ ಮಾಸ್ಕ್ ಧರಿಸುವುದು ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಕುರಿತು ಅರಿವು ಮೂಡಿಸುವ ಜವಾಬ್ದಾರಿಯನ್ನು ನಿರ್ವಹಿಸಿರಿ ಎಂದರು.

ಕವಿವಿ ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥೆ ಪ್ರೊ. ಸಂಗೀತಾ ಮಾನೆ ಮಾತನಾಡಿ, ಮನೆಯಲ್ಲಿನ ಮಕ್ಕಳ ಆರೋಗ್ಯ ಕಾಪಾಡುವ ಗುರುತರ ಜವಾಬ್ದಾರಿಯನ್ನು ಮಹಿಳೆಯರು ಪ್ರಾಮಾಣಿಕವಾಗಿ ನಿರ್ವಹಿಸಬೇಕಿದ್ದು, ಎಲ್ಲರ ಆರೋಗ್ಯ ರಕ್ಷಣೆಗೆ ರೋಗ ನಿಯಂತ್ರಣ ಕ್ರಮಗಳನ್ನು ಪ್ರತಿಯೊಬ್ಬರು ಕಟ್ಟುನಿಟ್ಟಾಗಿ ಪಾಲಿಸಲು ಮುಂದಾಗಬೇಕೆಂದು ಕರೆ ನೀಡಿದರು.

ಕವಿವಿ ಉನ್ನತ ಭಾರತ ಅಭಿಯಾನ ಕೋಶದ ಸಂಯೋಜಕ ಡಾ. ಎನ್. ರಾಮಾಂಜನೇಯಲು ಮಾತನಾಡಿ, ಜಿಲ್ಲೆಯ ಐದು ದತ್ತು ಗ್ರಾಮಗಳಲ್ಲಿ ಕೋವಿಡ್ 19 ಕುರಿತು ಅರಿವು ಕಾರ್ಯಕ್ರಮವನ್ನು ಅಭಿಯಾನ ಕೋಶದ ಮೂಲಕ ಹಮ್ಮಿಕೊಳ್ಳಲಾಗಿದ್ದು, ಗ್ರಾಮಸ್ಥರು ಕೊರೊನಾ ರೋಗದ ಬಗ್ಗೆ ನಿರ್ಲಕ್ಷ ವಹಿಸಬಾರದು ಎಂದರು. ಕುಟುಂಬ ಕಲ್ಯಾಣ ಸಂಘದ ಕಾರ್ಯಕ್ರಮ ಯೋಜನಾಧಿಕಾರಿ ರೋಗ ನಿಯಂತ್ರಣದ ಬಗ್ಗೆ ತಿಳುವಳಿಕೆಯನ್ನು ಕರಪತ್ರಗಳ ಮೂಲಕ ವಿವರಿಸಿದರು. ಸಮಾರಂಭದಲ್ಲಿ ನೂರಕ್ಕಿಂತಲು ಅಧಿಕ ಗ್ರಾಮಸ್ಥರಿಗೆ ಉಚಿತವಾಗಿ ಮಾಸ್ಕ್ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಪಂ. ಅಧ್ಯಕ್ಷೆ ಸಂಕವ್ವ ಬೆಟದೂರ, ಸದಸ್ಯರಾದ ಮೈಲಾರಿ ಕಡ್ಡಿಪಿಡಿ, ರಾಜು ಕಾಮಜಿ, ರಮೇಶ ಹೊಸಮನಿ, ಉಮೇಶ ಬಸರಿಕೊಪ್ಪ, ತಾ.ಪಂ. ಸದಸ್ಯ ಸಿದ್ದಪ್ಪ ಕುಂಬಾರ, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯೆ ಡಾ. ಸುಧಾ ಕೋಟೆಗೌಡರ, ಜಯಪಾಲ ಬೆಟದೂರ, ಯಲ್ಲಪ್ಪ ದೊಡ್ಡಮನಿ, ಈಶ್ವರ ಚಂದುನವರ, ಪ್ರಕಾಶ ಜೋಡಳ್ಳಿ, ನವೀನಕುಮಾರ ತಿಪ್ಪಾ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು. ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ನಾಗರಾಜ ಗಿರಿಯಪ್ಪನವರ ಸ್ವಾಗತಿಸಿದರು. ಬಸಮ್ಮ ನಿರೂಪಿಸಿದರು.

Regional Popular Dailies

SAMYUKTA KARNATAKA